**ದಿನಾಂಕ: 01-09-2008 ರಂದು ಸಂಜೆ 3.30ರಲ್ಲಿ ವಿಧಾನಸೌಧದ ಸಮಿತಿಯ ಕೊಠಡಿಯಲ್ಲಿ ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ *"ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ"* ಸಭೆಯ ನಡವಳಿಗಳು**

**ಹಾಜರಿದ್ದ ಸಚಿವರು/ಸಮಿತಿಯ ಸದಸ್ಯರು ಶ್ರೀಯುತರುಗಳಾದ**

ಡಾ॥ ವಿ.ಎಸ್.ಆಚಾರ್ಯ
ಸನ್ಮಾನ್ಯ ಗೃಹ ಸಚಿವರು

ಸುರೇಶ್ ಕುಮಾರ್, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಎ.ಎನ್.ಯಲ್ಲಪ್ಪರೆಡ್ಡಿ– ಅಧ್ಯಕ್ಷರು
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ

ಶಿರಡಿ ಪ್ರಸಾದ್ ಟೆಕೂರ್– ಸದಸ್ಯರು

ಡಾ॥ ಹೆಚ್.ಪರಮೇಶ್– ಸದಸ್ಯರು

ಡಾ॥ ಡಿ.ಸಿ. ಶರ್ಮ– ಸದಸ್ಯರು

ಶ್ರೀ. ಎಂ.ಆರ್. ಸುರೇಶ್ – ಸದಸ್ಯ ಕಾರ್ಯದರ್ಶಿ
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ

**ಹಾಜರಿದ್ದ ಅಧಿಕಾರಿಗಳು ಶ್ರೀಯುತರುಗಳಾದ**

ಎ. ರವೀಂದ್ರ, ನಿವೃತ್ತ ಮುಖ್ಯ ಕಾರ್ಯದರ್ಶಿ

ಆರ್. ಶ್ರೀಕುಮಾರ್, ಡಿ.ಜಿ & ಐ.ಜಿ.ಪಿ

ಅಭಿಜಿತ್ ದಾಸ್‌ಗುಪ್ತಾ, ಆಯುಕ್ತರು
ಮೆಟ್ರೋಪಾಲಿಟನ್, ಬಿ.ಎಂ.ಆರ್.ಡಿ

ಲತಾ ಕೃಷ್ಣರಾವ್
ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

ಎಂ.ವಿ.ಮೂರ್ತಿ
ಸಂಚಾರಿ ಪೋಲೀಸ್ ಆಯುಕ್ತರು

ಹೆಚ್.ಕೆ. ಜಗಧೀಶ್
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಿಬಿಎಂಪಿ

ಶಿವರಾಮ್ – ಆಯುಕ್ತರು,
ಆಹಾರ ಮತ್ತು ನಾಗರೀಕ ಸರಬರಾಜು ನಿಗಮ

ಪಿ.ಎಸ್. ಸಂದು
ನಿರ್ದೇಶಕರು, ಪರಿಸರ ವಿಭಾಗ, ಬಿ.ಎಂ.ಟಿ.ಸಿ

ಅಮರನಾಥ್ ಎಂ.ವಿ.
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಡಿಎ

ಎಸ್.ಪ್ರಭಲಾ
ಟ್ರಸ್ಟಿ ಬಿ.ಇ.ಟಿ

ಗೋವರ್ಧನ್
ಸದಸ್ಯರು, ಬಿ.ಇ.ಟಿ

ಜೈಪ್ರಸಾದ್
ತಾಂತ್ರಿಕ ಸಲಹೆಗಾರರು, ಬಿಬಿಎಂಪಿ

ಕೃಷ್ಣಾರೆಡ್ಡಿ, ಮುಖ್ಯ ಅಭಿಯಂತರರು (ಬೃ.ರ)

ಡಾ॥ ನಂದಿನಿ ಎನ್. ರೀಡರ್, ಪರಿಸರ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ

ಎನ್. ಜಯರಾಮ್,
ಅರಣ್ಯ ಸಂರಕ್ಷಣಾಧಿಕಾರಿಗಳು,
ಬಿ.ಎಂ.ಆರ್.ಸಿ.ಎಲ್

ಹೆಚ್.ಎ.ಅಫೀಜ್
ನಗರ ಯೋಜನಾ ವಿಭಾಗ

ಪ್ರವೀಣಸೂಧ್
ಅಪರ ಪೋಲಿಸ್ ಆಯುಕ್ತರು, (ಟ್ರಾಫಿಕ್)

ಸನ್ಮಾನ್ಯ ಗೃಹ ಸಚಿವರಾದ ಶ್ರೀ. ವಿ.ಎಸ್.ಆಚಾರ್ಯರವರು ಸಭೆಗೆ ಆಗಮಿಸಿದ್ದ ಸಚಿವರಾದ ಮಾನ್ಯ ಸುರೇಶ್ ಕುಮಾರ್, ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಶ್ರೀ.ಎ.ರವೀಂದ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರಾದ ಶ್ರೀ. ಎ.ಎನ್. ಯಲ್ಲಪ್ಪ ರೆಡ್ಡಿ ಹಾಗೂ ಸಮಿತಿಯ ಸದಸ್ಯರುಗಳು ಮತ್ತು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಲು ಕೋರಿದರು.

ಸನ್ಮಾನ್ಯ ಗೃಹ ಸಚಿವರು ಮಾತನಾಡುತ್ತಾ, ಬೆಂಗಳೂರು ನಗರದಲ್ಲಿ ಸುಗಮ ಸಂಚಾರ ಹಾಗೂ ಪರಿಸರ ಸಂರಕ್ಷಣೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಸಲಹೆ ಸೂಚನೆಗಳನ್ನು ಕೋರಿದರು.

ನಗರದಲ್ಲಿ ಸುಗಮ ಸಂಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸುತ್ತಾ ಸುಗಮ ಸಂಚಾರ, ಪರಿಸರ ರಕ್ಷಣೆ ಹಾಗೂ ಪರಿಸರ ಅಭಿವೃದ್ಧಿ ಮಾಡಲು ಸಂಬಂಧಪಟ್ಟ ಬಿಬಿಎಂಪಿ, ಬಿಡಬ್ಲ್ಯೂಎಸ್ಎಸ್‌ಬಿ, ಬೆಸ್ಕಾಂ, ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅರಣ್ಯ ಇಲಾಖೆಯವರು ಪರಸ್ಪರ ಸಮಾಲೋಚಿಸಿ ರಸ್ತೆ ಅಗಲೀಕರಣ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸನ್ಮಾನ್ಯ ಗೃಹ ಸಚಿವರು ತಿಳಿಸಿದರು.

ನಂತರ ಸುಗಮ ಸಂಚಾರದ ಬಗ್ಗೆ ಚರ್ಚಿಸುತ್ತಾ, ನಗರದಲ್ಲಿ ಬಿಬಿಎಂಪಿ ವತಿಯಿಂದ ರಸ್ತೆಗಳನ್ನು ಅಗಲೀಕರಣ ಮಾಡಿದ ಸಂದರ್ಭದಲ್ಲಿ ಅಲ್ಲಿ ಬರುವ ಮೂಲಭೂತ ಸೌಲಭ್ಯಗಳಾದ ವಿದ್ಯುತ್ ಕಂಬಗಳು, ಕುಡಿಯುವ ನೀರಿನ ಪೈಪುಗಳು, ಒಳಚರಂಡಿ ಪೈಪುಗಳನ್ನು ಸಕಾಲದಲ್ಲಿ ಸ್ಥಳಾಂತರಿಸಬೇಕಾಗಿರುತ್ತದೆ. ಇಂತಹ ವ್ಯವಸ್ಥೆಗಳನ್ನು ಸಂಬಂಧಪಟ್ಟ ಬೆಸ್ಕಾಂ, ಬೆಂಗಳೂರು ನೀರು ಸರಬರಾಜು ಮಂಡಳಿಗಳೂ ಬಿಬಿಎಂಪಿಯೊಂದಿಗೆ ಸಹಕರಿಸಿ ಯುಟಿಲಿಟಿಸ್‌ಗಳನ್ನು ಸ್ಥಳಾಂತರಿಸುವಂತೆ ಚರ್ಚಿಸಲಾಯಿತು.

ಮಾನ್ಯ ಗೃಹ ಸಚಿವರು ಮೂಲಸೌಕರ್ಯಗಳಾದ ರಸ್ತೆ ಅಗಲೀಕರಣ, ಮೆಟ್ರೋ ರೈಲ್ ನಿರ್ಮಾಣ ಮತ್ತು ಅಂಡರ್‌ಪಾಸ್‌ಗಳ ನಿರ್ಮಾಣ ಕಾರ್ಯಗಳಿಂದ ನಗರದ ಪರಿಸರಕ್ಕೆ ಧಕ್ಕೆಯಾಗದಂತೆ ಮಾನ್ಯ ಹೈಕೋರ್ಟ್ ನೇಮಿತ ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ಸಮಿತಿಯ ನಿರ್ದೇಶನದಂತೆ ತೆರವುಗೊಳಿಸುವ/ಸ್ಥಳಾಂತರಿಸುವ ಕಾರ್ಯ ಕೈಗೊಳ್ಳಬೇಕೆಂದು ಸೂಚಿಸಲಾಯಿತು. ರಸ್ತೆ ಅಗಲೀಕರಣ ಪ್ರಸ್ತುತ ಬೆಂಗಳೂರು ನಗರಕ್ಕೆ ಅನಿವಾರ್ಯವಾಗಿದ್ದು ಆದಷ್ಟು ಶೀಘ್ರ ಈ ಕೆಲಸ ಕಾರ್ಯೋನ್ಮುಖವಾಗಬೇಕೆಂದು ತಿಳಿಸಿದರು.

ನಂತರ ಅಡಿಷನಲ್ ಪೋಲೀಸ್ ಕಮಿಷನ್‌ರವರು ಬಿಬಿಎಂಪಿ ವತಿಯಿಂದ ರಸ್ತೆ ಅಗಲೀಕರಣಗೊಳಿಸಿರುವ ಸುಮಾರು 30 ಕಡೆ ರಸ್ತೆಗಳಲ್ಲಿ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ಟ್ರಾನ್ಸ್‌ಫಾರಂಗಳನ್ನು ಸ್ಥಳಾಂತರಿಸಿರುವುದಿಲ್ಲ. ಇದರಿಂದಾಗಿ ಕೆಲವು ಸಂದರ್ಭಗಳನ್ನು ಅಪಘಾತಗಳು ಸಂಭವಿಸುತ್ತವೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಸರಿಯಿಲ್ಲದ ಕಾರಣ ವಾಹನಗಳನ್ನು ರಸ್ತೆಯಲ್ಲಿ ಯದ್ವಾ-ತದ್ವಾ ನಿಲ್ಲಿಸಿರುತ್ತಾರೆ. ಇದರಿಂದ ಸುಗಮ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಕೆಲವು ಕಡೆಗಳಲ್ಲಿ ಸಿಗ್ನಲ್ ಪಕ್ಕದಲ್ಲಿಯೇ ಬಸ್ ನಿಲ್ದಾಣವಿದ್ದು ಅಲ್ಲಿ ಬಸ್‌ಗಳು, ಆಟೋಗಳು ನಿಲ್ಲುವುದರಿಂದ ಅಲ್ಲಿ ಸಾರ್ವಜನಿಕರ ಓಡಾಟಕ್ಕೆ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಪೊಲೀಸ್ ಇಲಾಖೆಯಿಂದ ದಂಡ ವಸೂಲಿ ಮಾಡಿದರೆ ಸಾಲದು, ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ವ್ಯವಸ್ಥೆ ಆಗಬೇಕು ಮತ್ತು ಸಿಗ್ನಲ್‌ಗೆ ಹತ್ತಿರದಲ್ಲಿರುವ ಬಸ್ ಶೆಲ್ಟರ್‌ಗಳನ್ನು ಸ್ಥಳಾಂತರಿಸುವಂತೆ ಕೋರಿದರು.

ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಲತಾ ಕೃಷ್ಣರಾವ್‌ರವರು ಮಾತನಾಡುತ್ತಾ, ರಸ್ತೆಗಳನ್ನು ಅಗಲೀಕರಣಗೊಳಿಸುವ ಸಂದರ್ಭದಲ್ಲಿ ಸಬ್‌ವೇ, ಮೇಲು ಸೇತುವೆ ನಿರ್ಮಾಣ ಮಾಡಿದ ಸಂದರ್ಭದಲ್ಲಿ ಅಲ್ಲಿನ ಕುಡಿಯುವ ನೀರಿನ ಪೈಪು, ಒಳಚರಂಡಿ ಪೈಪುಗಳನ್ನು ಸ್ಥಳಾಂತರಿಸಲು ಬಿಬಿಎಂಪಿ ವತಿಯಿಂದ ಹಣವನ್ನು ಬಿಡಬ್ಲ್ಯೂಎಸ್‌ಎಸ್‌ಬಿಗೆ ಠೇವಣಿ ಮಾಡುತ್ತಿಲ್ಲ ಇದರಿಂದಾಗಿ ಬಿಡಬ್ಲ್ಯೂಎಸ್‌ಎಸ್‌ಬಿ ಯಿಂದ ಯುಟಿಲಿಟಿಸ್‌ಗಳನ್ನು ಸ್ಥಳಾಂತರಿಸಲು ಕಷ್ಟವಾಗುತ್ತಿದೆ ಎಂದು ತಿಳಿಸುತ್ತಾ ಪಾಲಿಕೆಯಿಂದ ಹಣ ಬಿಡುಗಡೆ ಮಾಡುವಂತೆ ಕೋರಿದರು.

ರಸ್ತೆ ವಿಭಜಕಗಳ ಬಗ್ಗೆ ಚರ್ಚಿಸುತ್ತಾ ಇತ್ತೀಚೆಗೆ ರಸ್ತೆ ವಿಭಜಕಗಳ (Road Divider)ಕಲ್ಲಿಂದ ನಿರ್ಮಿಸುತ್ತಿಲ್ಲ. ರಸ್ತೆ ಬದಿ ಚರಂಡಿಗಳನ್ನು ಸರಿಯಾಗಿ ಅಭಿವೃದ್ಧಿ ಪಡಿಸಿ ನಿರ್ವಹಣೆ ಮಾಡುತ್ತಿಲ್ಲ. ರಸ್ತೆಯಲ್ಲಿ ಉಬ್ಬುಗಳನ್ನು ಸರಿಯಾದ ಕಡೆಗಳಲ್ಲಿ ನಿರ್ಮಿಸದೆ ಎಲ್ಲೆಂದರಲ್ಲಿ ರಸ್ತೆ ಉಬ್ಬುಗಳನ್ನು ನಿರ್ಮಿಸಿರುವ ಬಗ್ಗೆ ಸಹ ಚರ್ಚಿಸಲಾಯಿತು.

ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆ ತುಂಬಾ ಗಂಭೀರವಾಗಿದ್ದು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವಾಗಿ ನಕ್ಷೆಯಲ್ಲಿ ಸೆಲ್ಲರ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದರೂ ಸಹ ಸೆಲ್ಲರ್‌ಗಳಲ್ಲಿ ವಾಣಿಜ್ಯ ವ್ಯವಹಾರಗಳನ್ನು ನಡೆಸುತ್ತಿರುವುದು ಎಲ್ಲಾ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವುದರಿಂದ ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಪ್ರಸ್ತಾಪಿಸಲಾಯಿತು.

ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವಂತೆ ಸುಮಾರು 30 ಕಡೆಗಳಲ್ಲಿ "ಪೇ ಅಂಡ್ ಪಾರ್ಕಿಂಗ್" ವ್ಯವಸ್ಥೆಯನ್ನು ಕಲ್ಪಿಸಲು ಸ್ಥಳಗಳನ್ನು ಗುರುತಿಸಲಾಗಿದೆ. ಇದರಿಂದ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಲಾಯಿತು ಹಾಗೂ ನಗರದ ದೊಡ್ಡ ಕಟ್ಟಡಗಳಾದ ಫೋರಂ, ಗರುಡ ಮಹಲ್ ಇತ್ಯಾದಿ ಕಡೆಗಳಲ್ಲಿ ಆಟೋಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡದಿರುವ ಬಗ್ಗೆ ಪ್ರಸ್ತಾಪಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ. ಗೋವರ್ಧನ್ ರವರು ಬೆಂಗಳೂರು ನಗರದಾದ್ಯಂತ ಜಾಹಿರಾತಿನ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿದ್ದು ಇದನ್ನು ಕಡಿತಗೊಳಿಸಬೇಕೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಪೋಲಿಸ್ ಇಲಾಖೆಯ ಮಹಾನಿರ್ದೇಶಕರಾದ ಶ್ರೀಕುಮಾರ್ ರವರು ಬೆಂಗಳೂರು ನಗರದ ವಾಹನ ಸಂಚಾರವನ್ನು ಕಡಿಮೆಗೊಳಿಸಲು ಸಮೂಹ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಪ್ರತಿಪಾದಿಸಿದರು. ಇದಕ್ಕಾಗಿ ಬಿಎಂಟಿಸಿಯ ಎಲ್ಲಾ ಬಸ್ಸುಗಳಿಗೆ ಜಿ.ಪಿ.ಎಸ್ ವ್ಯವಸ್ಥೆ ಅಳವಡಿಸಿ ಕ್ಲಪ್ತ ಸಮಯಕ್ಕೆ ಬಸ್ಸುಗಳು ಪ್ರಯಾಣಿಕರಿಗೆ ಸಿಗುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಈ ಸಲಹೆಯನ್ನು ಮಾನ್ಯ ಗೃಹ ಸಚಿವರು ಹಾಗೂ ಶ್ರೀ ಯಲ್ಲಪ್ಪರೆಡ್ಡಿ ರವರು ಅನುಮೋದಿಸಿದರು.

ಮಾನ್ಯ ಶ್ರೀ. ಯಲ್ಲಪ್ಪರೆಡ್ಡಿ ರವರು ಬೆಂಗಳೂರು ನಗರದಲ್ಲಿ ನೋಂದಣಿಯಾಗುವ ಒಂದೇ ವ್ಯಕ್ತಿಯ ಒಂದಕ್ಕಿಂತ ಹೆಚ್ಚು ವಾಹನಗಳಿಗೆ ಇಕೋ ತೆರಿಗೆ ವಿಧಿಸುವುದು ಕಡ್ಡಾಯವಾಗಬೇಕೆಂದು ಅಭಿಪ್ರಾಯಪಟ್ಟರು.

ಶ್ರೀ. ಸುರೇಶ್ ಕುಮಾರ್, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತ್ತಾ, ಬಿಬಿಎಂಪಿ ರವರು ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಮಂಜೂರಾತಿ ಮಾಡುತ್ತಾರೆ ಆದರೆ ಪಾರ್ಕಿಂಗ್ ವ್ಯವಸ್ಥೆ ಸರಿಯಾಗಿ ಮಾಡಿರುವುದಿಲ್ಲವೆಂದು, ಅಪಾರ್ಟ್‌ಮೆಂಟ್‌ನವರು ತಮ್ಮ ತಮ್ಮ ವಾಹನಗಳನ್ನು ರಸ್ತೆಗಳಲ್ಲಿಯೇ ನಿಲ್ಲಿಸುವ ಅಭ್ಯಾಸ ಮಾಡಿಕೊಂಡಿರುತ್ತಾರೆ ಹಾಗೂ ಕೆಲವು ಸ್ಥಳಗಳಲ್ಲಿ ಬೇಕಾ ಬಿಟ್ಟಿ ವಾಹನಗಳನ್ನು ನಿಲ್ಲಿಸುತ್ತಾರೆ. ಈ ರೀತಿಯಾಗಿ ನಿಲ್ಲಿಸುವುದರಿಂದ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ ಎಂದು ಹೇಳಿದರು.

ಸನ್ಮಾನ್ಯ ಗೃಹ ಸಚಿವರು ಮಾತನಾಡುತ್ತಾ, ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕೆಂದು ಸೂಚಿಸುತ್ತಾ, ಸಭೆಯಲ್ಲಿದ್ದ ಸಮಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

15/9/08

ಅಧ್ಯಕ್ಷರು
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ